ಕರ್ನಾಟಕ ಸರ್ಕಾರ

ಸಂ: ಬಿಟಿಇ 02 ಇಸಿಎಸ್(2)2013

ಕಾರ್ಯದರ್ಶಿಯವರ ಕಚೇರಿ,
ತಾಂತ್ರಿಕ ಶಿಕ್ಷಣ ಪರೀಕ್ಷಾ ಮಂಡಳಿ,
ಅರಮನೆ ರಸ್ತೆ, ಬೆಂಗಳೂರು,
ದಿನಾಂಕ:16-8-2013.

## ಸುತ್ತೋಲೆ

**ವಿಷಯ:** 2013ರ ಏಪ್ರಿಲ್/ಮೇ ಸೆಮಿಸ್ಟರ್ ಪರೀಕ್ಷೆಯ ಥಿಯರಿ ವಿಷಯದ ಉತ್ತರ ಪತ್ರಿಕೆಗಳ ಮರುಮೌಲ್ಯಮಾಪನ ಕಾರ್ಯಕ್ಕೆ ಗೈರು ಹಾಜರಾಗಿರುವ ಉಪನ್ಯಾಸಕರ ಮೇಲೆ ಶಿಸ್ತು ಕ್ರಮ ಜರುಗಿಸುವ ಬಗ್ಗೆ

**ಉಲ್ಲೇಖ:**1)ಈ ಕಚೇರಿ ಸುತ್ತೋಲೆ ಸಂಖ್ಯೆ: ಬಿಟಿಇ 02 ಇಸಿಎಸ್(2)2013 ದಿ:07-08-2013

(2)ತಾಂತ್ರಿಕ ಪರೀಕ್ಷಾ ಮಂಡಳಿಯ 139ನೇ ಕೇಂದ್ರೀಯ ಸಭೆ ದಿ:27-12-2005ರ ನಿರ್ಣಯ 139.4.8.3

(3) ತಾಂತ್ರಿಕ ಪರೀಕ್ಷಾ ಮಂಡಳಿಯ 151ನೇ ಕೇಂದ್ರೀಯ ಸಭೆ ದಿ:27-1-2012ರ ನಿರ್ಣಯ 151.3.5

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ(1)ರ ಜ್ಞಾಪನದಲ್ಲಿ 2013ರ ಏಪ್ರಿಲ್/ಮೇ ಸೆಮಿಸ್ಟರ್ ಪರೀಕ್ಷೆಯ ಥಿಯರಿ ವಿಷಯದ ಉತ್ತರ ಪತ್ರಿಕೆಗಳ ಮರುಮೌಲ್ಯಮಾಪನ ಕಾರ್ಯಕ್ಕೆ ಉಪನ್ಯಾಸಕರುಗಳನ್ನು ನಿಯೋಜಿಸಲಾಗಿತ್ತು. ಅದಾಗ್ಯೂ ಹೆಚ್ಚಿನ ಉಪನ್ಯಾಸಕರುಗಳು ಮರುಮೌಲ್ಯಮಾಪನ ಕಾರ್ಯಕ್ಕೆ ಗೈರುಹಾಜರಾಗಿದ್ದು, ಮರುಮೌಲ್ಯಮಾಪನ ಫಲಿತಾಂಶವನ್ನು ಸಕಾಲದಲ್ಲಿ ಪ್ರಕಟಿಸಲು ಕಷ್ಟಸಾಧ್ಯವಾಗಿರುತ್ತದೆ.

ಪ್ರಯುಕ್ತ ಸಂಬಂಧಪಟ್ಟ ಎಲ್ಲಾ ಪ್ರಾಂಶುಪಾಲರುಗಳು ಬಿಟಿಇ ಲಿಂಕ್ಸ್‌ನಲ್ಲಿ ಪ್ರಕಟಿಸಲಾಗಿರುವ ಉಪನ್ಯಾಸಕರುಗಳನ್ನು ಮರುಮೌಲ್ಯಮಾಪನ ಕಾರ್ಯಕ್ಕೆ ಸಂಸ್ಥೆಗಳಿಂದ ತಕ್ಷಣ ಬಿಡುಗಡೆಗೊಳಿಸಲು ಸೂಚಿಸಲಾಗಿದೆ. ಮರುಮೌಲ್ಯಮಾಪನ ಕಾರ್ಯಕ್ಕೆ ಉಪನ್ಯಾಸಕರುಗಳನ್ನು ಕಾರ್ಯವಿಮುಕ್ತಿಗೊಳಿಸದ ಪ್ರಿನ್ಸಿಪಾಲರುಗಳನ್ನು ಮುಂದಿನ ಆಗು ಹೋಗುಗಳಿಗೆ ನೇರ ಹೊಣೆಗಾರರನ್ನಾಗಿಸಿ ಉಲ್ಲೇಖ(2) ಮತ್ತು (3)ರ ನಿರ್ಣಯಗಳಂತೆ ಕ್ರಮ ಜರುಗಿಸಲಾಗುವುದು.

16/8

ಕಾರ್ಯದರ್ಶಿ
***Secretary,***
***Board of Technical Examinations***
***Bangalore-560 001.***